ವಿಜಯವಾಣಿ ನಂ. 1 ಕನ್ನಡ ದಿನಪತ್ರಿಕೆ

## ಪ್ರಧಾನ ಸೇವಕನಿಗೆ ಅದ್ದೂರಿ ಸ್ವಾಗತ | ಜನರತ್ತ ಕೈಬೀಸಿ, ತಲೆಬಾಗಿ ನಮನ

# ಧಾರವಾಡಿಗರ ಪ್ರೀತಿಗೆ ಮನಸೋತ ನಮೋ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಪ್ರಧಾನಿಯಾದ ಬಳಿಕ ಪ್ರಥಮ ಬಾರಿಗೆ ಆಗಮಿಸಿದ ನರೇಂದ್ರ ಮೋದಿ ಅವರನ್ನು ನಗರದ ಜನರು ಅದ್ದೂರಿಯಾಗಿ ಸ್ವಾಗತಿಸಿದ್ದಲ್ಲದೆ, ನೆಚ್ಚಿನ ನಾಯಕ ಮೋದಿ ಅವರನ್ನು ಕಂಡು ಖುಷಿಪಟ್ಟರು.

ರಾಜ್ಯದಲ್ಲಿ ಸ್ಥಾಪಿಸಿದ ಪ್ರಥಮ ಐಐಟಿ ಕ್ಯಾಂಪಸ್ ಉದ್ಘಾಟನೆಗೆ ಭಾನುವಾರ ಮೋದಿ ಆಗಮಿಸಿದ್ದರು. ಸಮಾರಂಭದಲ್ಲಿ ಧಾರವಾಡ ಸೇರಿ ಸುತ್ತಲಿನ ಜಿಲ್ಲೆಗಳ ಬಹುತೇಕ ಜನರು ಪ್ರಧಾನಮಂತ್ರಿ ನೋಡಿ ಕಣ್ತುಂಬಿಕೊಳ್ಳಲೆಂದೇ ಹಾಜರಾಗಿದ್ದರು. ಮೋದಿ ವೇದಿಕೆಗೆ ಆಗಮಿಸುತ್ತಿದ್ದಂತೆ ಮೋದಿ...ಮೋದಿ... ಘೋಷಣೆ ಮೊಳಗಿಸಿ ಸ್ವಾಗತ ಕೋರಿದರು. ಧಾರವಾಡಿಗರ ಪ್ರೀತಿ, ಪ್ರೇಮಕ್ಕೆ ಮನಸೋತ ಪ್ರಧಾನಮಂತ್ರಿ ಸಹ ಜೈಕಾರಕ್ಕೆ ಪ್ರತಿಯಾಗಿ ಜನರತ್ತ ಕೈಬೀಸಿ, ನಮಸ್ಕರಿಸಿದರು. ಸಮಾರಂಭದ ಕೊನೆಯಲ್ಲಿ ಶಿರಬಾಗಿ ನಮಿಸಿ ಜನರ ಪ್ರೀತಿಗೆ ಆಭಾರಿಯಾಗಿದ್ದೇನೆ ಎಂಬ ಭಾವನೆಯಲ್ಲಿ ಕೃತಜ್ಞತೆ ಸಲ್ಲಿಸಿದರು.

ಜಿಲ್ಲೆಯ ಜನರು ಸಮಾರಂಭಕ್ಕೆ ಆಗಮಿಸಲು ಅನುಕೂಲವಾಗಲಿ ಎಂದು 1500ಕ್ಕೂ ಹೆಚ್ಚು ಸಾರಿಗೆ ಬಸ್, ಖಾಸಗಿ ವಾಹನಗಳ ವ್ಯವಸ್ಥೆ ಮಾಡಲಾಗಿತ್ತು. ಸಮಾರಂಭಕ್ಕೆ ಆಗಮಿಸಿದ್ದ ಎಲ್ಲ ವಾಹನಗಳಿಗೆ ಪ್ರತ್ಯೇಕ ಪಾರ್ಕಿಂಗ್ ಜಾಗಗಳನ್ನು ಗುರುತಿಸಿದ್ದರಿಂದ ಹೆಚ್ಚಿನ



ಧಾರವಾಡ ಐಐಟಿ ಉದ್ಘಾಟನೆ ಸಮಾರಂಭದ ಬಳಿಕ ಜನಕತೆಗೆ ಶಿರಬಾಗಿ ನಮಸ್ಕರಿಸಿದ ಪ್ರಧಾನಿ ನರೇಂದ್ರ ಮೋದಿ.



ಉದ್ಘಾಟನೆ ಸಮಾರಂಭಕ್ಕೆ ಆಗಮಿಸಿದ್ದ ವಾಹನಗಳ ಪಾರ್ಕಿಂಗ್ ವ್ಯವಸ್ಥೆ.

### ಗಮನ ಸೆಳೆದ ಕಟೌಟ್

ಐಐಟಿಗೆ ಆಗಮಿಸಿದ್ದ ಜನರು ಪ್ರಧಾನಮಂತ್ರಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾವಚಿತ್ರದೊಂದಿಗೆ ವಿವಿಧ ಯೋಜನೆಗಳ ಮಾಹಿತಿಯೊಂದಿಗೆ ಸಿದ್ಧಪಡಿಸಿದ್ದ 4-5 ಅಡಿ ಎತ್ತರದ ಕಟೌಟ್‌ಗಳನ್ನು ತಂದಿದ್ದರು. ಅವುಗಳ ಜತೆಗೆ ಸೆಲ್ಫಿ, ಫೋಟೋ ತೆಗೆಸಿಕೊಂಡು ಸಂಭ್ರಮಿಸಿದ ಜನರಿಗೆ ಕೆಲ ಕ್ಷಣದಲ್ಲೇ ನಿರಾಸೆ ಮೂಡಿತ್ತು. ವೇದಿಕೆ ಪ್ರವೇಶ ಸಂದರ್ಭದಲ್ಲಿ ಕಟೌಟ್‌ಗಳಿಗೆ ಭದ್ರತಾ ಸಿಬ್ಬಂದಿ ಅನುಮತಿ ನೀಡದ ಕಾರಣ ಆವರಣದ ಹೊರಗಡೆಯೇ ಇಟ್ಟು ಬೇಸರದಿಂದಲೇ ಒಳನಡೆದರು.

### ಟಿ ಶರ್ಟ್‌ಗೆ ಮುಗಿಬಿದ್ದ ಯುವಕರು

ಐಐಟಿ ಉದ್ಘಾಟನೆಯ ವೇದಿಕೆ ಹೊರ ಆವರಣದಲ್ಲಿ ಯುವ ಜನತೆಗೆ 'ನಮ್ಮ ಸಿಎಂ ನಮ್ಮ ಹೆಮ್ಮೆ' ಎಂದು ಬರೆದಿದ್ದ ಟಿ ಶರ್ಟ್‌ಗಳನ್ನು ನೀಡಲಾಗುತ್ತಿತ್ತು. ಶರ್ಟ್ ಪಡೆಯಲು ನೂರಾರು ಸಂಖ್ಯೆಯಲ್ಲಿ ಯುವಕರು ಮುಗಿಬಿದ್ದಿದ್ದರಿಂದ ಕೆಲ ಹೊತ್ತು ಗದ್ದಲದ ವಾತಾವರಣ ನಿರ್ಮಾಣವಾಗಿತ್ತು. ಬಳಿಕ ಶರ್ಟ್ ಹಂಚಿಕೆ ಸ್ಥಗಿತಗೊಳಿಸಲಾಯಿತು.



### ಬಿಗಿ ಬಂದೋಬಸ್ತ್

ಪ್ರಧಾನಿ ಆಗಮನದ ಹಿನ್ನೆಲೆಯಲ್ಲಿ ಐಐಟಿ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಸಮಾರಂಭಕ್ಕೆ ಆಗಮಿಸುವ ಗಣ್ಯರಿಂದ ಹಿಡಿದು ಎಲ್ಲರಿಗೂ ತಪಾಸಣೆ ನಡೆಸಿ ಪ್ರವೇಶ ನೀಡಲಾಗಿತ್ತು. ಪ್ರವೇಶ ದ್ವಾರ ಬಳಿ 10ಕ್ಕೂ ಹೆಚ್ಚು (ಮಹಿಳೆಯರಿಗೆ ಪ್ರತ್ಯೇಕ) ಹಾಗೂ ವಿಐಪಿಗೆ ಪ್ರತ್ಯೇಕ ಸ್ಕ್ರೀನಿಂಗ್ ಕೇಂದ್ರಗಳನ್ನು ತೆರೆಯಲಾಗಿತ್ತು. ಪ್ರತಿ ಪ್ರವೇಶ ದ್ವಾರ ಬಳಿ ತಪಾಸಣೆ ನಡೆಸುತ್ತಿದ್ದವರು ಗುಟ್ಕಾ ಪ್ಯಾಕೆಟ್‌ಗಳನ್ನು ಕಸಿದು ಪ್ರವೇಶ ನೀಡುತ್ತಿದ್ದರು.

### ಅಚ್ಚುಕಟ್ಟಾದ ವ್ಯವಸ್ಥೆ

ಸಮಾರಂಭದ ಸ್ಥಳದಲ್ಲಿ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿತ್ತು. ಎಲ್ಲ ಜನರಿಗೆ ಊಟ, ಕುಡಿಯುವ ನೀರು, ಮಜ್ಜಿಗೆ ವಿತರಿಸಲಾಯಿತು. 15 ಕೌಂಟರ್‌ಗಳಲ್ಲಿ ಗದ್ದಲ ಇಲ್ಲದೆ ಭೋಜನದ ವ್ಯವಸ್ಥೆ, ಎರಡ್ಮೂರು ಕಡೆಗಳಲ್ಲಿ ಪೈಪ್‌ಲೈನ್ ಅಳವಡಿಸಿ

### ವಿವಿಐಪಿ, ವಿಐಪಿ ಪಾಸ್ ಇದ್ದವರಿಗೆ ನಿರಾಸೆ

ಪಾಲಿಕೆ ಸದಸ್ಯರು ತಮ್ಮ ವಾರ್ಡ್‌ನ ಜನರು ಸೇರಿ ಇತರರು ಸಮಾರಂಭಕ್ಕೆ ಆಗಮಿಸಿ ಹತ್ತಿರದಿಂದಲೇ ಮೋದಿ ಅವರನ್ನು ಕಾಣಲಿ ಎಂಬ ದೃಷ್ಟಿಯಿಂದ ವಿವಿಐಪಿ, ವಿಐಪಿ ಪಾಸ್‌ಗಳನ್ನು ವಿತರಿಸಿದ್ದರು. ಆದರೆ, ಸಮಾರಂಭದ ವಿವಿಐಪಿ ಪ್ರವೇಶ ದ್ವಾರದ ಬಳಿ ಈ ಪಾಸ್‌ಗಳಿಗೆ ಭದ್ರತಾ ಸಿಬ್ಬಂದಿ ಮಾನ್ಯತೆ ನೀಡಲಿಲ್ಲ. ಸರ್ಕಾರ ನೀಡಿದ ಪಾಸ್ ಇದ್ದವರಿಗೆ ಮಾತ್ರ ಪ್ರವೇಶ ನೀಡಿದ ಸಿಬ್ಬಂದಿ, ಪಾಲಿಕೆ ಸದಸ್ಯರ ಪಾಸ್ ಹೊಂದಿದವರಿಗೆ ಸಾಮಾನ್ಯರ ಪ್ರವೇಶದಿಂದ ಆಗಮಿಸುವಂತೆ ಸೂಚಿಸಿದರು. ಹೀಗಾಗಿ ಅತೀ ಹುರುಪಿನಿಂದ ವಿಐಪಿ ಪಾಸ್ ಪಡೆದವರು ನಿರಾಸೆ ಅನುಭವಿಸುವಂತಾಯಿತು.

Hubli Edition
Mar 13, 2023 Page No. 5
Powered by : eReleGo.com

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

## ₹ 3,400 ಕೋಟಿ ವೆಚ್ಚದ ವಿವಿಧ ಯೋಜನೆಗಳ ಉದ್ಘಾಟನೆ, ಶಂಕುಸ್ಥಾಪನೆ

# ಐಐಟಿ ಕಟ್ಟಡ, ರೈಲ್ವೆ ಪ್ಲಾಟ್‌ಫಾರ್ಮ್ ಲೋಕಾರ್ಪಣೆ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ಕೇಂದ್ರ ಸರ್ಕಾರ 852 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿದ ಧಾರವಾಡ ಐಐಟಿ ನೂತನ ಕಟ್ಟಡವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಭಾನುವಾರ ಲೋಕಾರ್ಪಣೆ ಮಾಡಿದರು.

ತಾಲೂಕಿನ ಮುಮ್ಮಿಗಟ್ಟಿ ಗ್ರಾಮ ವ್ಯಾಪ್ತಿಯಲ್ಲಿ ನಿರ್ಮಿಸಲಾದ ಐಐಟಿ ಕಟ್ಟಡದ ಉದ್ಘಾಟನೆ ಸಮಾರಂಭದ ವೇದಿಕೆಯಿಂದಲೇ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ನಿಲ್ದಾಣದಲ್ಲಿ ನಿರ್ಮಿಸಿದ ವಿಶ್ವದ ಅತಿ ಉದ್ದನೆಯ ರೈಲ್ವೆ ಪ್ಲಾಟ್‌ಫಾರ್ಮ್, 519 ಕೋಟಿ ರೂ. ವೆಚ್ಚದಲ್ಲಿ ವಿದ್ಯುದೀಕರಣಗೊಂಡ ಹೊಸಪೇಟೆ- ಹುಬ್ಬಳ್ಳಿ- ತಿನೈಘಾಟ್ ಮಾರ್ಗ, 13 ಕೋಟಿ ರೂ. ವೆಚ್ಚದಲ್ಲಿ ಉನ್ನತೀಕರಣಗೊಂಡ ಹೊಸಪೇಟೆ ನಿಲ್ದಾಣ, ಹುಬ್ಬಳ್ಳಿ- ಧಾರವಾಡ ಸ್ಮಾರ್ಟ್ ಸಿಟಿ ಯೋಜನೆಯಡಿ 353 ಕೋಟಿ ರೂ. ವೆಚ್ಚದ 15 ವಿವಿಧ ಯೋಜನೆಗಳನ್ನು ಪ್ರಧಾನಿ ಲೋಕಾರ್ಪಣೆ ಮಾಡಿದರು. ಇದೇವೇಳೆ ಜೆಜೆಎಂ ಅಡಿ ಧಾರವಾಡ ಬಹುಗ್ರಾಮ ನೀರು ಸರಬರಾಜು ಯೋಜನೆ, ಹು-ಧಾ ಸ್ಮಾರ್ಟ್ ಸಿಟಿ ಯೋಜನೆಯಡಿ ಕ್ರೀಡಾ ಸಂಕೀರ್ಣ ನಿರ್ಮಾಣ, ಜಯದೇವ ಹೃದ್ರೋಗ ಆಸ್ಪತ್ರೆ, ತುಪ್ಪರಿಹಳ್ಳ ಪ್ರವಾಹ ಹಾನಿ ನಿಯಂತ್ರಣ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಶಂಕುಸ್ಥಾಪನೆ ನೆರವೇರಿಸಿದರು.



**ಧಾರವಾಡ ಐಐಟಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ವಿದ್ಯುತ್ ಚಾಲಿತ ಹುಬ್ಬಳ್ಳಿ- ದಾದರ್ ಎಕ್ಸ್‌ಪ್ರೆಸ್ ಮತ್ತು ಬೆಳಗಾವಿ- ಸಿಕಂದರಾಬಾದ್ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹಸಿರು ನಿಶಾನೆ ತೋರಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಶಂಕರ ಪಾಟೀಲ ಮುನೇನಕೊಪ್ಪ, ಬಿ.ಎ. ಬಸವರಾಜ, ವಿ. ಸೋಮಣ್ಣ, ಗೋವಿಂದ ಕಾರಜೋಳ, ಸಿ.ಸಿ. ಪಾಟೀಲ, ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರಾದ ಜಗದೀಶ ಶೆಟ್ಟರ್, ಅರವಿಂದ ಬೆಲ್ಲದ ಇದ್ದರು.**

**ರೈಲ್ವೆಗಳಿಗೆ ಚಾಲನೆ:** ಹುಬ್ಬಳ್ಳಿಯಿಂದ ಹೊರಡುವ ವಿದ್ಯುತ್ ಚಾಲಿತ ಹುಬ್ಬಳ್ಳಿ- ದಾದರ್ ಎಕ್ಸ್‌ಪ್ರೆಸ್ ಮತ್ತು ಬೆಳಗಾವಿ- ಸಿಕಂದರಾಬಾದ್ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಪ್ರಧಾನಿ ಹಸಿರು ನಿಶಾನೆ ತೋರಿ ಚಾಲನೆ ನೀಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸ್ವಾಗತಿಸಿದರು. ಸಚಿವರಾದ ವಿ. ಸೋಮಣ್ಣ, ಗೋವಿಂದ ಕಾರಜೋಳ, ಬಿ.ಎ. ಬಸವರಾಜ, ಶಂಕರ ಪಾಟೀಲ ಮುನೇನಕೊಪ್ಪ, ಸಿ.ಸಿ. ಪಾಟೀಲ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರಾದ ಜಗದೀಶ ಶೆಟ್ಟರ್, ಅರವಿಂದ ಬೆಲ್ಲದ, ಸಿ.ಎಂ. ನಿಂಬಣ್ಣವರ, ಅಮೃತ ದೇಸಾಯಿ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್ ಹಾಗೂ ಮೇಯರ್ ಈರೇಶ ಅಂಚಟಗೇರಿ ವೇದಿಕೆಯಲ್ಲಿದ್ದರು.

Hubli Edition
Mar 13, 2023 Page No. 5
Powered by : eReleGo.com